## ಸಭಾ ನಡವಳಿ

ವಿಷಯ:- ಪದಕಣಜ ಮತ್ತು ದೇಸೀಕರಣ ಸಮಿತಿ ಸಭೆ ದಿನಾಂಕ: 03.09.2022

********

ದಿನಾಂಕ: 03.09.2022 ರಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಪದಕಣಜ ಮತ್ತು ದೇಸೀಕರಣ ಸಮಿತಿಯ ಅಧ್ಯಕ್ಷರೂ ಆದ ಶ್ರೀ ಟಿ.ಎಸ್. ನಾಗಾಭರಣರವರ ಅಧ್ಯಕ್ಷತೆಯಲ್ಲಿ ವಿಡಿಯೋ ಸಂವಾದದ ಮೂಲಕ ನಡೆಸಲಾದ ಪದಕಣಜ ಮತ್ತು ದೇಸೀಕರಣ ಸಮಿತಿ ಸಭೆಯ ನಡವಳಿ.

### ಸಭೆಯಲ್ಲಿ ಹಾಜರಿದ್ದವರು

| | | | |
|---|---|---|---|
| 1. | ಶ್ರೀ ಟಿ.ಎಸ್.ನಾಗಾಭರಣ | : | ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಹಾಗೂ ಪದಕಣಜ ಮತ್ತು ದೇಸೀಕರಣ ಸಮಿತಿ, ವಿಧಾನ ಸೌಧ ಬೆಂಗಳೂರು. |
| 2. | ಶ್ರೀ ಕೆ.ಎಸ್.ಶಿವರಾಮು | : | ಸದಸ್ಯ ಕಾರ್ಯದರ್ಶಿಗಳು, ಪದಕಣಜ ಮತ್ತು ದೇಸೀಕರಣ ಸಮಿತಿ ಹಾಗೂ ಯೋಜನಾ ನಿರ್ದೇಶಕರು, ಇ-ಕನ್ನಡ ಯೋಜನೆ, ಇ ಆಡಳಿತ ಕೇಂದ್ರ, ಬೆಂಗಳೂರು |
| 3. | ಶ್ರೀ ಶ್ರೀವ್ಯಾಸ್ | : | ಯೋಜನಾ ನಿರ್ದೇಶಕರು, ಇ-ಸಹಮತಿ ಯೋಜನೆ, ಇ ಆಡಳಿತ ಕೇಂದ್ರ |
| 4. | ಶ್ರೀಮತಿ ನಾಗವೇಣಿ ಮಂಚಿ | : | ಸದಸ್ಯರು, ಪದಕಣಜ ಮತ್ತು ದೇಸೀಕರಣ ಸಮಿತಿ |
| 5. | ಶ್ರೀ ರಾಜಶೇಖರ್ ಎಚ್.ಎನ್. | : | ಸದಸ್ಯರು, ಪದಕಣಜ ಮತ್ತು ದೇಸೀಕರಣ ಸಮಿತಿ |
| 6. | ಶ್ರೀ ವೆಂಕಟೇಶ ಎಂ.ಎನ್. | : | ಸದಸ್ಯರು, ಪದಕಣಜ ಮತ್ತು ದೇಸೀಕರಣ ಸಮಿತಿ |
| 7. | ಡಾ. ಅನ್ನಪೂರ್ಣ ಎನ್.ಎಸ್. | : | ಸದಸ್ಯರು, ಪದಕಣಜ ಮತ್ತು ದೇಸೀಕರಣ ಸಮಿತಿ |
| 8. | ಶ್ರೀ ರಾಜೇಶ ಎನ್. | : | ಸದಸ್ಯರು, ಪದಕಣಜ ಮತ್ತು ದೇಸೀಕರಣ ಸಮಿತಿ |
| 9. | ಪುಷ್ಪ ಎಂ. | : | ಯೋಜನಾ ವ್ಯವಸ್ಥಾಪಕರು, ಇ-ಕನ್ನಡ ಯೋಜನೆ, ಇ- ಆಡಳಿತ ಕೇಂದ್ರ, ಬೆಂಗಳೂರು. |
| 10. | ಜೀವರಾಜ್ ಭಟ್ | | ಹಿರಿಯ ಸಂಪನ್ಮೂಲ ವ್ಯಕ್ತಿ, ಇ-ಕನ್ನಡ ಯೋಜನೆ |

ಇ-ಕನ್ನಡ ಯೋಜನೆಯ ಯೋಜನಾ ವ್ಯವಸ್ಥಾಪಕರು ಸಭೆಯಲ್ಲಿ ಹಾಜರಿದ್ದ ಸದಸ್ಯರೆಲ್ಲರನ್ನು ಸಭೆಗೆ ಸ್ವಾಗತಿಸಿ, ಇ-ಸಹಮತಿ ತಂತ್ರಾಂಶದ ಇಂಗ್ಲೀಷ್ ಪದಪುಂಜಗಳನ್ನು ಕನ್ನಡೀಕರಣಗೊಳಿಸಲಾಗಿದ್ದು, ಅಂತಿಮ ಅನುಮೋದನೆ ಪಡೆಯಲು ಈ ಸಭೆಯನ್ನು ಕರೆಯಲಾಗಿದೆ ಎಂದು ವಿವರಿಸಿದರು.

ಇ-ಸಹಮತಿ ತಂತ್ರಾಂಶ ಒಟ್ಟು 258 ಇಂಗ್ಲೀಷ್ ಪದಪುಂಜಗಳನ್ನು ಹೊಂದಿದ್ದು, ಯೋಜನಾ ವ್ಯವಸ್ಥಾಪಕರು ತಂತ್ರಾಂಶದ ಈ ಎಲ್ಲಾ ಪದಪುಂಜಗಳನ್ನು ಸಮಿತಿಗೆ ವಿವರಿಸಿದರು.

ಸಭೆಯಲ್ಲಿ ಹಾಜರಿದ್ದ ಇ-ಸಹಮತಿ ತಂತ್ರಾಂಶದ ಯೋಜನಾ ನಿರ್ದೇಶಕರು, ಇಂಗ್ಲೀಷ್ ಪದಪುಂಜಗಳು ಇ-ಸಹಮತಿ ತಂತ್ರಾಂಶದಲ್ಲಿ ಯಾವ ಸಂದರ್ಭದಲ್ಲಿ ಬಳಕೆ ಆಗುತ್ತವೆ ಮತ್ತು ಅದನ್ನು ಯಾವ ರೀತಿಯಲ್ಲಿ ಅರ್ಥೈಸಬೇಕು ಎಂಬುದನ್ನು ತಿಳಿಸಿದರು.

ಸಭೆಯ ವೇಳೆ Data Seeker Request/ Relational Operator/ Generate xml / URL/ Date of incorporation/ Why consent framework? / Data Fiduciary/ Stakeholder Departments/ Query Output Result/ Processors / Farmer Producer Companies (FPO)/ Feed Back ಸೇರಿದಂತೆ ಇನ್ನೂ ಅನೇಕ ಇಂಗ್ಲೀಷ್ ಪದಪುಂಜಗಳ ಸಂದರ್ಭೋಚಿತ ಅರ್ಥಗಳನ್ನು ಗ್ರಹಿಸಿ ಅವುಗಳಿಗೆ ಸೂಕ್ತ ಕನ್ನಡ ಪದಗಳನ್ನು ಸಮಿತಿ ಸದಸ್ಯರು ಸೂಚಿಸಿದರು.

ಸದಸ್ಯರ ಅಭಿಪ್ರಾಯ ಪಡೆದು, ಚರ್ಚಿಸಿ ಇ- ಸಹಮತಿ ತಂತ್ರಾಂಶದ ಎಲ್ಲಾ ಪದಪುಂಜಗಳನ್ನು ಅಂತಿಮಗೊಳಿಸಲಾಯಿತು. ಸಭೆಯಲ್ಲಿ ಅಂತಿಮಗೊಳಿಸಲಾದ ಪದಪುಂಜಗಳಿಗೆ ಸಮಿತಿ ಅಧ್ಯಕ್ಷರು ಅನುಮೋದನೆ ನೀಡಿದರು.

ಇದೇ ವೇಳೆ ಸಾರಿಗೆ ಇಲಾಖೆಯ ಪರಿವಹನ್ ಸೇವಾ ತಂತ್ರಾಂಶದ ಆಂಗ್ಲ ಪದಪುಂಜಗಳ ಕನ್ನಡೀಕರಣ ಕಾರ್ಯವೂ ಪೂರ್ಣಗೊಂಡಿದ್ದು, ಸಮಿತಿಯ ಸದಸ್ಯರು ತಮ್ಮ ಅಭಿಪ್ರಾಯವನ್ನು ನೀಡುವಂತೆ ಅಧ್ಯಕ್ಷರು ಸೂಚಿಸಿದರು.

ಕೊನೆಯದಾಗಿ, ಸಭೆಯಲ್ಲಿ ಭಾಗವಹಿಸಿ, ಸಲಹೆ, ಸೂಚನೆ, ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ ಎಲ್ಲಾ ಸದಸ್ಯರಿಗೂ ಯೋಜನಾ ವ್ಯವಸ್ಥಾಪಕರು ವಂದಿಸಿದ ನಂತರ ಸಭೆ ಮುಕ್ತಾಯಗೊಂಡಿತು.

(ಟಿ.ಎಸ್. ನಾಗಾಭರಣ)

ಅಧ್ಯಕ್ಷರು,
ಕನ್ನಡ ಅಭಿವೃದ್ಧಿ ಪ್ರಾಧಿಕಾರ ಹಾಗೂ
ಅಧ್ಯಕ್ಷರು, ಪದಕಣಜ ಮತ್ತು
ದೇಸೀಕರಣ ಸಮಿತಿ.